RNU AIR DHARWAD

OCTOBER 24, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಕಾವೇರಿ ನದಿ ನೀರು ಹಂಚಿಕೆ ಕುರಿತಂತೆ ಹೊಸದಿಲ್ಲಿಯಲ್ಲಿ ಆಯೋಜಿತ,** ಕಾವೇರಿ ಜಲ ನಿಯಂತ್ರಣ ಸಮಿತಿ – CWRC, 145 ನೇ ಸಭೆಯಲ್ಲಿ, ಇಂದಿನಿಂದ ಮುಂದಿನ 15 ದಿನಗಳ ಕಾಲ, ತಮಿಳುನಾಡಿಗೆ ದಿನವೊಂದಕ್ಕೆ, 3 ಸಾವಿರ ಕ್ಯೂಸೆಕ್ ನಷ್ಟು ನೀರು ಹರಿಸುವಂತೆ ಆದೇಶಿಸಿದೆ. ಸಭೆಯಲ್ಲಿ ಕರ್ನಾಟಕ ಹಾಗೂ ತಮಿಳುನಾಡಿನ ಜಲಾಶಯಗಳಲ್ಲಿನ ನೀರಿನ ಲಭ್ಯತೆ ಕುರಿತು ಮಾಹಿತಿ ಪಡೆದು, ಎರಡೂ ರಾಜ್ಯಗಳ ವಾದವನ್ನು ಆಲಿಸಿದ ಜಲ ನಿಯಂತ್ರಣ ಸಮಿತಿ, ತಮಿಳುನಾಡಿನ ಬೇಡಿಕೆಯಾಗಿದ್ದ, 14 ಸಾವಿರದ 236 ಕ್ಯೂಸೆಕ್ ಬದಲಾಗಿ, 3 ಸಾವಿರ ಕ್ಯೂಸೆಕ್ ನೀರು ಬಿಡಲು ಅನುಮತಿಸಿದೆ.

<><><>

**ವಿಮಾನ ಕಾರ್ಯಾಚರಣೆ ಸ್ಥಗಿತಗೊಂಡ** ಹಿನ್ನೆಲೆ, ಸೌದಿ ಅರೇಬಿಯಾದ ಮಕ್ಕಾ ಮತ್ತು ಮದೀನಾದಲ್ಲಿ ಸಿಲುಕಿರುವ, ರಾಜ್ಯದ 600 ಕ್ಕೂ ಹೆಚ್ಚು, ಉಮ್ರಾ ಯಾತ್ರಿಕರನ್ನು ಸುರಕ್ಷಿತವಾಗಿ ತಾಯ್ನಾಡಿಗೆ ಕರೆತರಲು, ತುರ್ತು ಮಧ್ಯಪ್ರವೇಶವಂತೆ ಕೋರಿ, ಕೇಂದ್ರ ವಿದೇಶಾಂಗ ಖಾತೆ ಸಚಿವ ಡಾಕ್ಟರ ಎಸ್. ಜೈಶಂಕರ್ ಅವರಿಗೆ ಪತ್ರ ಬರೆದಿದ್ದಾಗಿ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ತಿಳಿಸಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿರುವ ಮುಖ್ಯಮಂತ್ರಿ ಅವರು, ರಾಜ್ಯ ಸರ್ಕಾರ ಅಗತ್ಯವಿರುವ ಎಲ್ಲ ರೀತಿಯ ಸಹಕಾರ ನೀಡಲು ಸನ್ನದ್ಧವಾಗಿದೆ. ಯಾತ್ರಿಕರ ಸುರಕ್ಷತೆ, ಘನತೆ ಮತ್ತು ಯೋಗಕ್ಷೇಮ ಮೊದಲ ಆದ್ಯತೆಯಾಗಿದೆ ಎಂದಿದ್ದಾರೆ.

<><><>

**ಕಿತ್ತೂರು ರಾಣಿ ಚನ್ನಮ್ಮ ಅವರ ಶೌರ್ಯ** ಮತ್ತು ಧೈರ್ಯ, ನಾಡಿನ ಹೆಣ್ಣುಮಕ್ಕಳಿಗೆ ಸ್ವಾವಲಂಬನೆ ಹಾಗೂ ದೇಶಪ್ರೇಮದ ದೊಡ್ಡ ಪ್ರೇರಣೆಯಾಗಿದೆ ಎಂದು ಚಿತ್ರದುರ್ಗ ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಹೇಳಿದ್ದಾರೆ. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಯೋಜಿತ, 'ಕಿತ್ತೂರು ರಾಣಿ ಚನ್ನಮ್ಮ ಜಯಂತಿ' ಕಾರ್ಯಕ್ರಮದಲ್ಲಿ, ಚನ್ನಮ್ಮನವರ ಭಾವಚಿತ್ರಕ್ಕೆ ಪು ್ಪನಮನ ಸಲ್ಲಿಸಿ ಅವರು ಮಾತನಾಡಿದರು.

<><><>

**ಬೀದರ ಜಿಲ್ಲೆ, ಭಾಲ್ಕಿಯ ಹಿರೇಮಠದ,** ಚನ್ನಬಸವೇಶ್ವರ ಗುರುಕುಲ ಆವರಣದ, ಅನುಭವ ಮಂಟಪದಲ್ಲಿ ಆರಂಭಗೊಂಡ, 3 ದಿನಗಳ, ರಾಜ್ಯ ಇತಿಹಾಸ ಅಕಾಡೆಮಿಯ, 40ನೇ ವಾರ್ಷಿಕ ಸಮ್ಮೇಳನದಲ್ಲಿ, ಶಾಸನತಜ್ಞ ಡಾಕ್ಟರ್ ಜೆ.ಎಂ. ನಾಗಯ್ಯ ಹಾಗೂ ಇತಿಹಾಸ ಸಂಶೋಧಕಿ ಡಾಕ್ಟರ್ ಸ್ಮಿತಾ ಸುರೇಬಾನಕರ ಅವರಿಗೆ, 'ಇತಿಹಾಸ ಸಂಸ್ಕೃತಿ ಶ್ರೀ' ಪ್ರಶಸ್ತಿಯನ್ನು, ಜಿಲ್ಲಾ ಉಸ್ತುವಾರಿ ಸಚಿವ, ಈಶ್ವರ ಖಂಡ್ರೆ ಪ್ರದಾನಿಸಿ, ಗೌರವಿಸಿದರು.ಭಾಲ್ಕಿ ಹಿರೇಮಠದ ನಾಡೋಜ ಬಸವಲಿಂಗ ಪಟ್ಟದ್ದೇವರು ಮತ್ತು ಗುರುಬಸವ

ಪಟ್ಟದ್ದೇವರು, ಸಮ್ಮೇಳನದ ಸರ್ವಾಧ್ಯಕ್ಷ ಡಾಕ್ಟರ್ ಕೆ. ರವೀಂದ್ರನಾಥ, ಅಕಾಡೆಮಿ ಅಧ್ಯಕ್ಷ ಡಾಕ್ಟರ್ ದೇವರ ಕೊಂಡಾರೆಡ್ಡಿ ಸೇರಿದಂತೆ, ಅನೇಕ ಗಣ್ಯರು ಪಾಲ್ಗೊಂಡಿದ್ದರು.

<><><>

**ಚಿಕ್ಕಮಗಳೂರು ಜಿಲ್ಲೆ, ಶೃಂಗೇರಿ, ಮೆಣಸೆಯ,** ಶ್ರೀ ರಾಜೀವ ಗಾಂಧಿ ಸಂಸ್ಕೃತ ಕೇಂದ್ರಿಯ ವಿಶ್ವ ವಿದ್ಯಾಲಯದ ಆವರಣದಲ್ಲಿ, ಇಂದು ಭಾರತೀಯ ಸಂತ ಮಹಾ ಪರಿಷತ್ತಿನ ಎರಡು ಮಹೋನ್ನತ ಕ್ರಿಯಾ ಯೋಜನೆಗಳ ಲೋಕಾರ್ಪಣೆ ಕಾರ್ಯಕ್ರಮ ಆಯೋಜಿತವಾಗಿದೆ.

<><><>

**ಹಾವೇರಿ ಜಿಲ್ಲೆ, ಶಿಗ್ಗಾಂವ ತಾಲೂಕು, ನಾರಾಯಣಪುರ** ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಆಯೋಜಿತ, 2026–27 ನೇ ಸಾಲಿನ, ರಾಜ್ಯ ಮಟ್ಟದ ಬಾಲಕ ಮತ್ತು ಬಾಲಕಿಯರ ಮಲ್ಲಕಂಬ ಸ್ಪರ್ಧೆಯಲ್ಲಿ, ವಿವಿಧ ಜಿಲ್ಲೆಗಳ ಒಟ್ಟು 8 ಜನ ವಿದ್ಯಾರ್ಥಿಗಳು ಜಯ ಗಳಿಸಿದ್ದು, ರಾಷ್ಟ್ರಮಟ್ಟದ ಸ್ಪರ್ಧೆಗಳಿಗೆ ಅರ್ಹತೆ ಪಡೆದಿದ್ದಾರೆ. ಮಧ್ಯಪ್ರದೇಶದ ಉಜ್ಜೈನಿಯಲ್ಲಿ ನವೆಂಬರ್ ತಿಂಗಳಲ್ಲಿ ರಾಷ್ಟ್ರೀಯ ಮಟ್ಟದ ಮಲ್ಲಕಂಬ ಸ್ಪರ್ಧೆಗಳು ಆಯೋಜಿತವಾಗಿವೆ. ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಹಾವೇರಿ ಜಿಲ್ಲಾ ದೈಹಿಕ ಶಿಕ್ಷಣ ಪರಿವೀಕ್ಷಣಾಧಿಕಾರಿ ಅಲ್ವಿನ್ ಅಂದ್ರಾಡೆ...

<><><>

**ಅಲ್ವಿನ್ ಅಂದ್ರಾಡೆ ಧ್ವನಿ– 38 ಸೆಕೆಂದುಗಳು**

<><><>

**ಆಕಾಶವಾಣಿಯ ಬಹುಶ್ರುತ,** 'ಮನ್ ಕಿ ಬಾತ್'ನ, 139ನೇ ಸಂಚಿಕೆ, ನಾಳೆ 25ನೇ ತಾರೀಖು, ಭಾನುವಾರ ಬೆಳಗ್ಗೆ 11 ಗಂಟೆಗೆ, ಪ್ರಸಾರವಾಗಲಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ದೇಶ ವಿದೇಶಗಳಲ್ಲಿರುವ ಭಾರತೀಯರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಆಕಾಶವಾಣಿ ಹಾಗೂ ದೂರದರ್ಶನ ಸೇರಿದಂತೆ, ನ್ಯೂಸ್ ಆನ್ ಏರ್ ಜಾಲತಾಣದಲ್ಲೂ, ಏಕಕಾಲಕ್ಕೆ ಪ್ರಸಾರವಾಗಲಿದೆ. ಬಳಿಕ, ಕನ್ನಡ ಹಾಗೂ ಇತರೆ ಪ್ರಾದೇಶಿಕ ಭಾಷೆಗಳಲ್ಲಿ, ಮನದ ಮಾತು ಪ್ರಸಾರವಾಗಲಿದೆ.

<><><>

**ಖೇತ್ ಬಚಾವೋ ಅಭಿಯಾನದ,** ಅಂಗವಾಗಿ ಉತ್ತರಕನ್ನಡ ಜಿಲ್ಲೆ, ಮುಡಗೇರಿ ಗ್ರಾಮದಲ್ಲಿ ಕೃಷಿ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಯಿತು.ಕೃಷಿ ವಿಜ್ಞಾನಿಗಳು ಹಾಗೂ ಸಿಬ್ಬಂದಿ ಒಳಗೊಂಡ ತಂಡವು, ಮುಡಗೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ, ಭತ್ತದ ಗದ್ದೆಗಳಿಗೆ ಭೇಟಿ ನೀಡಿ, ರೈತರೊಂದಿಗೆ ಸಂವಾದ ನಡೆಸಿತು.  ವಿಜ್ಞಾನಿ ಡಾಕ್ಟರ ಸಿ. ಕಾಳಿದಾಸ್, ರಸಗೊಬ್ಬರಗಳ ಸಮತೋಲಿತ ಬಳಕೆ, ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಹಾಗೂ ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆಗಳ ಕುರಿತು ರೈತರಿಗೆ ಮಾಹಿತಿ ನೀಡಿದರು.

<><><>

**27ನೇ ತಾರೀಖು,** ಬೆಳಗ್ಗೆ 11 ಗಂಟೆಗೆ, ಬೆಂಗಳೂರಿನ ವಿಕಾಸಸೌಧದ, 3ನೇ ಮಹಡಿಯ, ಕೊಠಡಿ ಸಂಖ್ಯೆ 318ರಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಅಧಿಕಾರಿಗಳು ಹಾಗೂ ಸಿಬ್ಬಂದಿಗೆ, ಭ್ರ ಷ್ಟಾಚಾರ ವಿರೋಧಿ, ವಿಚಕ್ಷಣಾ ಪ್ರತಿಜ್ಞಾ ವಿಧಿ ಬೋಧಿಸಲಿದ್ದಾರೆ.

<><><>

ಜಪಾನ್ ದೇಶದ, ಐಚಿ ನಗೋಯದಲ್ಲಿ ಆಯೋಜಿತ, ಏ ೈನ್ ಪ್ಯಾರಾ ಗೇಮ್ಸ್‌ನ, ಎಸ್.ಎಲ್-4 ಪ್ಯಾರಾ ಬ್ಯಾಡ್ಮಿಂಟನ್ ಸ್ಪರ್ಧೆಯಲ್ಲಿ ಕರ್ನಾಟಕದ ಸುಹಾಸ ಯತಿರಾಜು ಕಂಚಿನ ಪದಕ ಜಯಿಸಿದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ

<><><>